ಹುಡಗೂರಿಗೆ ಕೆಟ್ಟ ಕೆಟ್ಟ ಪ್ರಬಂಧಗಳನ್ನ ಬರೆದದ್ದಕ್ಕ ಛೊಲೋತ್ನ್ಯಾಗಿ ಬೈದು... ಉಸ್ಸಪ್ಪಾ ಅಂತ ಕೂತಿದ್ದಳು. ಹೈಸ್ಕೂಲಿನ ಪುಷ್ಪಗಳು ಊಟಕ್ಕ ಕೂತಿದ್ದವು. ದಾಸವಾಳವಂತೂ ಒಂದ ಸಮನ ತನ್ನ ಗಂಡನ ಮತ್ತು ಇಬ್ಬರು ಅತಿ ಜಾಣ ಗಂಡುಮಕ್ಕಳ ವರ್ಣನಾ ಮಾಡಲಿಕ್ಕೆ ಹತ್ತಿತ್ತು. ಈ ದಾಸಾಳಕ್ಕ ಇಷ್ಟು ಮಾತಾಡೋ ತಾಕತ್ತು ಹೆಂಗ ಕೊಟ್ಟಾನಪಾ ದೇವರು ಅನ್ನೋದ ಜಾಜಿಗೆ ಆಶ್ಚರ್ಯ! ಯಾರರ ಕೇಳಲಿ, ಬಿಡಲಿ! ಈ ದಾಸವಾಳಕ್ಕ ಇನ್ನೆರಡು ಜೀವದ ಗೆಳತಿಯರು... ಕಣಗಿಲ ಮತ್ತ ಚೆಂಡು ಹೂ. ಮೂರೂ ಒಂದನ್ನೊಂದು ಬಿಟ್ಟು ಕ್ಷಣ ಮಾತ್ರವೂ ಇರತಿರಲಿಲ್ಲ. ತಾನು ನೆನ್ನೆ ರಾತ್ರಿ ಪಾರ್ಟಿಗೆ ಹಾಕಿದ ಗಿಡ್ಡ ಡ್ರೆಸ್ಸು ಅದಕ್ಕ, ಹೆಂಗ ಒಳಗಿನ ಅರಿಬೀ ಹೊಂದಿಸಿಗೊಂಡಳು, ಯಾವ ಬಣ್ಣದ ಒಳಗಿನ ಅರಿಬಿ ಹಾಕ್ಕೊಂಡಿದ್ದಳಂತ ಒಟ್ಟೊಟ್ಟ ನಾಚಿಗಿ ಇಲ್ಲದವರ ಹಾಂಗ ಜೋರ ಧ್ವನೀಲೆ ಯಾರಿಗರ ಕೇಳೋ ಆಸಕ್ತಿ ಅದನೋ ಇಲ್ಲೋ ಅನ್ನೋದೂ ವಿಚಾರ ಮಾಡದ ಹೇಳಲಿಕ್ಕೆ ಹತ್ತಿತ್ತು. ಬಾಜೂಕ್ ಕೂತ ಕಣಗಿಲ, ಚೆಂಡು ತಮಗಿದ್ದ ಎರಡು ಕಿವಿ, ಎರಡು ಕಣ್ಣುಗಳನ್ನ ನಾಕು ನಾಕು ಮಾಡಿಕೊಂಡು ಕೇಳಲಿಕ್ಕೆ ಹತ್ತಿದ್ದವು. ಬ್ಯಾರೆ ಬ್ಯಾರೆ ಹೂಗೋಳು ಬ್ಯಾಸರದಿಂದ ಒಮ್ಮೊಮ್ಮೆ ಹೂಂ ಅನಕೋತ ತಮ್ಮ ಡಬ್ಬಿ ತಿನಕೋತ ಕೂತಿದ್ದವು. ಚೆಂಡು ಹೂವಿಗೆ ಎಕದಮ್ ಉತ್ಸಾಹ ಹೆಚ್ಚಾದಂತಾಗಿ ತನ್ನಬಳಿ ಯಾವ ಬಣ್ಣದ್ದ ಬೇಕಾದ್ದ ಒಳಗಿನ ಅರಿಬಿ ಅವ ಯಾರಿಗರ ನೋಡಬೇಕಂತಿದ್ದರ ಮನೀಗೆ ಬರ್ರಿ ಅಂದಿತು. ಜಾಜಿ ವಾಕರಿಕಿ ಬಂದಂಗ ಆತು. ಎದ್ದು ಹೊರಗ ಹೋಗಿ ಬರೋಣಂತ ಹೊಂಟಾಕಿಗೆ ಕೆಳಗಿನ ತವರು ಮನಿಯಿಂದ ಫೋನು ಬಂತು. ಯಾರಪಾ ಅಂದ್ರ ಮಲ್ಲಿಗಿ ಮೀರಾಳೇ ಫೋನ್ ಮಾಡಿದ್ದಳು. 'ಜಾಜಿ... ನಿಮ್ಮ ಜೊತೆ ಮಾತಾಡಿ ಹಗುರಾಗ್ಬೇಕು ಅಂತನ್ನಿಸುತ್ತೆ. ಬರಲಾ?' ಎಂದಳು. ಜಾಜಿ ಇಕೀ ಕವನದ ಡೇಲಿವರಿ ತಾನ ಮಾಡಿಸಬೇಕಾಗತದೋ ಏನೋ ಅಂತ ಮನಸ್ಸಿನ್ಯಾಗ ಘುಟಘುಟಿಸಿಗೋತ, 'ನಾನೇ ಬರ್ತೀನಿ ಮೀರಾ' ಎಂದಳು. ತನ್ನ ಡಬ್ಬೀ ತಗದು ವಾಂಗೀ ಭಾತನ್ನು ಲಗು ಲಗು ಉಣ್ಣಲಿಕ್ಕೆ ಸುರುಮಾಡಿದಳು. ಕಣಗಿಲ ಹೊರ, ಒಳ ಉಡುಪುಗಳ ತನ್ನ ಜ್ಞಾನ ಭಂಡಾರವನ್ನು ಎಲ್ಲರಿಗೂ ಸುರದು ಸುರದು ಹಂಚಲಿಕ್ಕಹತ್ತಿತ್ತು. ಯಾವ ಬಣ್ಣದ ಅರಬೀಯಿಂದ ಹುಲುಮಾನವರ ಸೆಕ್ಸ್ ಲೈಫ್ ಹೆಂಗ ಹಿಗ್ಗಿ ಕುಗ್ಗತದಾಂತ ಜಿಗದ್ ಜಿಗದ್ ಹೇಳಿಕ್ಕೆ ಹತ್ತಿತ್ತು. ಜಾಜಿಗೆ ಇಂಥಾ ಮಾತು ಕೇಳಿ ಸ್ವಲ್ಪ ಹೇಸಿಗಿ ಬರತಿತ್ತು. ಇವರೆಲ್ಲಾ ಹೆಂಗ ತಮ್ಮ ವೈಯಕ್ತಿಕ ಸುದ್ದಿ ಹಿಂಗ ಟಾಂ ಟಾಂ ಮಾಡಿಕೋತಾರಲ್ಲಪಾ ಅಂತ ಅಚ್ಚರಿಯಾಗತಿತ್ತು. ಈ ಕಗ್ಗ ಮಂದಿಯ ನಡುವ ಕನ್ನಡದ ಪಾರಿಜಾತವೊಂದು ಸದ್ದಿಲ್ಲದ ತನ್ನ ಕೆಲಸ ಮುಗಿಸಿ ಮುಗುಳು ನಗುತ್ತಾ ಜಾಜಿಗೆ ಕಣ್ಣುಗಳಲ್ಲೇ ಬರ್ತೇನೆ ಎಂದು ಹೇಳುತ್ತಾ ಥೇಟ್ ಪಾರಿಜಾತದಂತೆಯೇ ಕೆಳಗಿಳಿದು ಮನೆಗೆ ಹೋಗಿಬಿಟ್ಟಿತು. ಗಣಿತದ ಗುಂಡು ಮೊಲ್ಲೆಯೊಂದು ಬಂದು ಜಾಜಿಯ ಬಳಿ ಕೂತು ತನ್ನ ಮಗ ಏನೂ ಓದುತ್ತಿಲ್ಲವೆಂದು ಇನ್ನಿಲ್ಲದಂತೆ ಗೋಳಾಡಿತು. ಎಷ್ಟ ಬಂದಾವವಾ ಮಾರ್ಕ್ಸ್ ಅಂತ ಕೇಳಿದಾಗ, 'ಎರಡು ಮಾರ್ಕ್ಸ್ ಕಳಕೊಂಡಿದ್ದಾನೆ... ಎಷ್ಟು ಹೇಳತೀನಿ... ಯಾವ ಮಿಸ್ಟೇಕ್ ಮಾಡಬೇಡ ಅಂತೀನೋ ಅದನ್ನೇ ಮಾಡತಾನ' ಎಂದು ಮನದ ಕಣ್ಣಿನಿಂದ ಇಬ್ಬನಿ ಸುರಿಸಿತು. ಸಮಾಜ ಶಾಸ್ತ್ರದ ಸೂಜಿಮೊಲ್ಲೆ ಅದನ್ನು ಸಮಾಧಾನಿಸಿತು. ವಾಂಗೀಭಾತು ಮೆಲ್ಲುತ್ತಿದ್ದ ಕಾರಣ ಜಾಜಿಗೆ ನಿಶ್ಶಬ್ದವಾಗಿ ತಲೆಯಲ್ಲಾಡಿಸಲಷ್ಟೇ ಸಾಧ್ಯವಾಯಿತು. ಇನ್ನೂ ಅರ್ಧ ಡಬ್ಬಿ ಮುಗಿದಿತ್ತಷ್ಟೇ!... ಮಲ್ಲಿಗೆಯಂಥ ಮೀರಾ ಬಂದಬಿಟ್ಟಳು. ಆಕಿಯ ಗಲ್ಲ ಮೂಗು ಕೆಂಪಾಗಿದ್ದವು. ಗುಂಡು ಮೊಲ್ಲೆ ಸೂಜಿ ಮೊಲ್ಲೆ ದೂರ ಸರಿದವು. 'ಏನ್ರೀ... ಹುಟ್ಟಿತಾ?!'